# ಗಂಗಾತಟದಲ್ಲೊಂದು ಸೇವಾಯಜ್ಞ



ಬ್ರ. ವಿವಿಕ್ತಚೈತನ್ಯ

ಸ್ವಾಮಿ ವಿವೇಕಾನಂದರ ಸೇವಾತತ್ತ್ವವು ಸಾಕಾರರೂಪವನ್ನು ಪಡೆದ ಪ್ರಮುಖ ಕೇಂದ್ರಗಳಲ್ಲಿ ಒಂದು ಈಗ ಶತಮಾನೋತ್ಸವವನ್ನು ಆಚರಿಸುತ್ತಿರುವ ಹರಿದ್ವಾರದ ರಾಮಕೃಷ್ಣ ಮಿಷನ್ ಸೇವಾಶ್ರಮ. ಅದು ಹುಟ್ಟಿ ಬೆಳೆದುಬಂದ ಸ್ವಾರಸ್ಯಕರ ವೃತ್ತಾಂತ ಇದು.

ಪತಿತಪಾವನೆ ಗಂಗೆ! ಸಹಸ್ರಾರು ವರ್ಷಗಳಿಂದ ಕೋಟ್ಯಂತರ ಶ್ರದ್ಧಾಳುಗಳ ಮೈಮನಗಳ ಕೊಳೆಯನ್ನು ಕಳೆದು ಮುಕ್ತಿಪಥದೆಡೆಗೆ ಕೊಂಡೊಯ್ಯುತ್ತಿರುವ ಭಾಗೀರಥಿ! ಹರನ ಶಿರದಿಂದ ಇಳಿದು, ತಂದೆ ಹಿಮವಂತನ ಕಣಿವೆಗಳಲ್ಲಿ ಮನುಕುಲಕ್ಕೆ ಕಾಣಿಸಿಕೊಂಡು, ಕಾರ್ಗಲ್ಲ ಕಡಿದಾದ ದಾರಿಗಳಲ್ಲಿ ರುದ್ರಭಯಂಕರವಾಗಿ, ಅಟ್ಟಹಾಸದಿಂದ ರಭಸದಲ್ಲಿ ಮೈದಾನಗಳಿಗೆ ಇಳಿದು ಬರುವಳು ಆ ತಾಯಿ. ಮೈದಾನಕ್ಕೆ ಇಳಿದು ಬಂದು ಶಾಂತಳಾಗುವಳು. ವಿಸ್ತರಿಸಿಕೊಂಡು, ವಿಶಾಲವಾಗುವಳು. ಆ ಪುಣ್ಯಸ್ಥಳವೇ ಹರಿದ್ವಾರ. ಹರದ್ವಾರವೂ ಹೌದು. ಏಕೆಂದರೆ, ಹಿಮಾಲಯದ ಪವಿತ್ರ ಹರಿಹರರ ಕ್ಷೇತ್ರಗಳಾದ ಬದರೀನಾಥ, ಕೇದಾರನಾಥಗಳಿಗೆ ಹೆಬ್ಬಾಗಿಲಿನಂತಿದೆ ಈ ನಗರ.

ಇದೊಂದು ಪುರಾತನ ಯಜ್ಞಭೂಮಿ. ಇಲ್ಲಿನ ಕನ್‌ಖಲ್ ಎಂಬ ಜಾಗದಲ್ಲಿಯೇ ದಕ್ಷಪ್ರಜಾಪತಿ ದೊಡ್ಡ ಯಾಗ ಮಾಡಿದ್ದು, ಶಿವನ ಪತ್ನಿ ಸತಿ ತನಗಾದ ಅಪಮಾನ ತಾಳಲಾರದೆ ಹೋಮಾಗ್ನಿಗೆ ಧುಮುಕಿ ಪ್ರಾಣತ್ಯಾಗ ಮಾಡಿದ್ದು. ಇಲ್ಲಿನ ಬ್ರಹ್ಮಕುಂಡ ಪವಿತ್ರತಮ ತೀರ್ಥ. ಪುರಾಣಗಳ ಪ್ರಕಾರ ಅಮೃತದ ಹನಿಗಳು ಬಿದ್ದ ನಾಲ್ಕು ಪುಣ್ಯಧಾಮಗಳಲ್ಲಿ ಇದೂ ಒಂದು. ಇದು ಅನೇಕ ಸಾಧು ಸಂತರ ತಪೋಭೂಮಿ. ಸಹಸ್ರಾರು ವರ್ಷಗಳ ಆಧ್ಯಾತ್ಮಿಕ ಚೈತನ್ಯದಿಂದ ಕೂಡಿರುವ ಪರಿಸರ ಇದರದ್ದು. ಲಕ್ಷಗಟ್ಟಲೆ ಯಾತ್ರಾರ್ಥಿಗಳ ಶ್ರದ್ಧೆಯ ತಾಣ ಇದು. ಒಟ್ಟಿನಲ್ಲಿ ಹರಿದ್ವಾರ ನಿಜವಾಗಿಯೂ ಹರಿಯೆಡೆಗೆ ಕೊಂಡೊಯ್ಯುವ ದ್ವಾರವೇ ಆಗಿದೆ.

ಇಂದಿಗೂ ಇಲ್ಲೊಂದು ಬೃಹದ್ ಯಜ್ಞ ನಡೆಯುತ್ತಿದೆ. ನೂರು ವರ್ಷಗಳ ಹಿಂದೆ ಆರಂಭವಾದ ಈ ಪವಿತ್ರ ಯಾಗದಲ್ಲಿ ಭೌತಿಕ ಅಗ್ನಿಯೇ ಇಲ್ಲ, ತುಪ್ಪ ಹವಿಸ್ಸುಗಳಿಲ್ಲ, ವೇದಮಂತ್ರಗಳಿಲ್ಲ. ಇದೊಂದು ಆಧುನಿಕ ಯಜ್ಞ. ಸ್ವಾಮಿ ವಿವೇಕಾನಂದರ ಪ್ರೇರಣೆಯಿಂದ ಆರಂಭಗೊಂಡ ಸೇವಾಯಜ್ಞ. ಭಗವಾನ್ ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿಯವರ ಕೃಪಾಶೀರ್ವಾದಗಳಿಂದ ಒಂದು ಶತಮಾನದ ಕಾಲ ಅವಿಚ್ಛಿನ್ನವಾಗಿ ನಡೆದುಕೊಂಡು ಬಂದು ಸಹಸ್ರಾರು ರೋಗಿ ನಾರಾಯಣರ ಸೇವಾಪೂಜೆಯನ್ನು ಮಾಡುತ್ತ ಬಂದಿರುವ, ಇದು ಈ ಯುಗಕ್ಕೆ ಅವಶ್ಯಕವಾದ ಯಜ್ಞ.

೧೯೦೧ನೆಯ ಇಸವಿ. ಸ್ವಾಮಿ ವಿವೇಕಾನಂದರು ಯುವಸಂನ್ಯಾಸಿ ಶಿಷ್ಯ ಸ್ವಾಮಿ ಕಲ್ಯಾಣಾನಂದರನ್ನು ಕರೆದು ಋಷಿಕೇಶ ಹರಿದ್ವಾರಗಳಲ್ಲಿರುವ ರೋಗಗ್ರಸ್ತ ಸಾಧುಸಂನ್ಯಾಸಿಗಳ ಸೇವೆ ಮಾಡುವಂತೆ ಹೇಳಿದರು. ಗುರುವಿನ ಆದೇಶಪಾಲನೆಯೇ ಪರಮ ಆಧ್ಯಾತ್ಮಿಕ ಸಾಧನೆ ಎಂದು ಪರಿಗಣಿಸಿದ ಕಲ್ಯಾಣಾನಂದರು, ಹರಿದ್ವಾರದ ಸನಿಹದಲ್ಲಿರುವ ಕನ್‌ಖಲ್‌ನಲ್ಲಿ ಜೂನ್ ೧೯೦೧ರಲ್ಲಿ ತಮ್ಮ ಸೇವಾಯಜ್ಞವನ್ನು ಆರಂಭಿಸಿದರು. ಎರಡು ಕೊಠಡಿಗಳನ್ನು ತಿಂಗಳಿಗೆ ೩ ರೂಪಾಯಿಗಳಿಗೆ ಬಾಡಿಗೆಗೆ ತೆಗೆದುಕೊಂಡರು. ಔಷಧಿಗಳ ಒಂದು ಸಣ್ಣಪೆಟ್ಟಿಗೆ, ಕೆಲವು ಸಣ್ಣಪುಟ್ಟ ಪರಿಕರಗಳು—ಇವಿಷ್ಟೇ ಈ ಸೇವಾಶ್ರಮ ಹೊಂದಿದ್ದ ಆಸ್ತಿ. ಮೊದಲ ವರ್ಷ ಆರು ಜನ ಸಾಧುಗಳಿಗೆ ಆಶ್ರಯ ನೀಡಿ ಆರೈಕೆ ಮಾಡಲಾಯಿತು., ೪೮ ಜನ ಹೊರರೋಗಿಗಳು ಚಿಕಿತ್ಸೆ ಪಡೆದರು. ಸ್ವಾಮಿ ಜಪಾನಂದ ಮತ್ತು ಬ್ರಹ್ಮಚಾರಿ ಸುರೇನ್ ಕಲ್ಯಾಣಾನಂದರಿಗೆ ಸೇವಾಶ್ರಮದ ನಿರ್ವಹಣೆಯಲ್ಲಿ ಸಹಾಯ ಮಾಡುತ್ತಿದ್ದರು. ಮೂರು ಜನ ಸಾಧುಗಳೂ, ತಮ್ಮ ಆಹಾರಕ್ಕಾಗಿ ಮಧುಕರಿ ಭಿಕ್ಷೆ ಮಾಡುತ್ತಿದ್ದರು. ಸೇವಾಶ್ರಮಕ್ಕೆ ತಮ್ಮ ಆಹಾರದ ಖರ್ಚನ್ನು ಮಿಗಿಸುವುದೇ ಇದರ ಉದ್ದೇಶ. ೧೯೦೨ರತನಕ ಈ

ಪದ್ಧತಿಯೇ ನಡೆದುಕೊಂಡು ಬಂದಿತು.

ಸೇವಾಶ್ರಮದ ಕಾರ್ಯದ ಬಗ್ಗೆ ವರದಿಗಳು ಹೀಗೆ ಹೇಳುತ್ತವೆ: 'ಆಶ್ರಮದ ಕಾರ್ಯ, ಅಂದರೆ ರೋಗಿಗಳನ್ನು ಆರೈಕೆ ಮಾಡುವುದು, ಔಷಧಿಗಳನ್ನು ಕೊಡುವುದು, ರೋಗಿಗಳ ಊಟೋಪಚಾರದ ವ್ಯವಸ್ಥೆ ನೋಡಿಕೊಳ್ಳುವುದು, ಕಟ್ಟಡಗಳ ನಿರ್ಮಾಣ—ಇವುಗಳೆಲ್ಲವನ್ನೂ ಇಬ್ಬರು ಸಂನ್ಯಾಸಿಗಳು ಮತ್ತು ಒಬ್ಬ ಬ್ರಹ್ಮಚಾರಿ ನಿರ್ವಹಿಸುತ್ತಿದ್ದರು. ಅವರಿಗೆ ಸಹಾಯಕರಾಗಿದ್ದವರೆಂದರೆ, ಒಬ್ಬ ಅಡಿಗೆಯವನು, ಒಬ್ಬ ಸೇವಕ ಮತ್ತು ಒಬ್ಬ ಕಸ ಗುಡಿಸುವವನು ಮಾತ್ರ.'

'ಆಶ್ರಮ ಆರಂಭಗೊಂಡದ್ದು ಬಾಡಿಗೆ ಮನೆಯೊಂದರಲ್ಲಿ. ಅಜ್ಞಾತನಾಗಿರಲು ಬಯಸಿದ ಕಲ್ಕತ್ತೆಯ ಒಬ್ಬ ದಾನಿ ೧೫ ಬಿಘಾ ಜಾಗವನ್ನು ಕೊಳ್ಳಲು ಧನಸಹಾಯ ಮಾಡಿದರು. ೧೯೦೬ರ ಏಪ್ರಿಲ್ ತಿಂಗಳಿನಲ್ಲಿ ಆ ಜಾಗವನ್ನು ಕೊಳ್ಳಲಾಯಿತು. ಸ್ವಾಮಿ ಕಲ್ಯಾಣಾನಂದರ ಎಡೆಬಿಡದ ಪರಿಶ್ರಮದಿಂದಲೇ ಇದು ಸಾಧ್ಯವಾಯಿತು. ಒಡನೆ ಕೆಲವು ಗುಡಿಸಲುಗಳನ್ನು ನಿರ್ಮಿಸಿ, ಆಶ್ರಮವನ್ನು ಇಲ್ಲಿಗೆ ಸ್ಥಳಾಂತರಿಸಲಾಯಿತು. ಒಂದು ಹಂತದಲ್ಲಿ ಬಾಬು ಭಜನ್ ಲಾಲ್ ಲೋಹಿಯಾ ಅವರ ನೇತೃತ್ವದಲ್ಲಿ ಕೆಲವು ಮಾರವಾಡಿ ಭಕ್ತರು ಹಲವು ಕಟ್ಟಡಗಳ ನಿರ್ಮಾಣಕ್ಕೆ ಸಹಾಯ ಮಾಡಲು ಮುಂದೆ ಬಂದರು. ಆ ಕಟ್ಟಡಗಳನ್ನು ರೂ. ೬,೦೭೧ ವೆಚ್ಚದಲ್ಲಿ ಈಗ ತಾನೇ ಕಟ್ಟಿಮುಗಿಸಿದ್ದೇವೆ ಎಂದು ತಮಗೆ ತಿಳಿಸಲು ಸಂತೋಷವಾಗುತ್ತದೆ. ಕಟ್ಟಡಗಳ ನಕಾಶೆಗಳನ್ನು ಸ್ವಾಮಿ ವಿಜ್ಞಾನಾನಂದಜಿಯವರು ಸಿದ್ಧಪಡಿಸಿಕೊಟ್ಟರು.'

ಇದು ವರದಿಗಳು ನಮಗೆ ಕೊಡುವ ಚಿತ್ರ. ಈ ಸೇವಾಕಾರ್ಯದ ರೂವಾರಿಗಳಾದ ಇಬ್ಬರು ಮಹಾನ್ ಚೇತನಗಳೆಂದರೆ ಸ್ವಾಮಿ ಕಲ್ಯಾಣಾನಂದರು ಮತ್ತು ಸ್ವಾಮಿ ನಿಶ್ಚಯಾನಂದರು. ಇವರನ್ನು ಅಶ್ವಿನೀ ದೇವತೆಗಳೆಂದು ಕರೆಯುವುದು ರೂಢಿ. ಸ್ವಾಮಿ ಕಲ್ಯಾಣಾನಂದರ ಜೀವನದ ವಿವರವನ್ನು ಈ ಸಂಚಿಕೆಯಲ್ಲಿಯೇ ಪ್ರಕಟವಾಗಿರುವ ಒಂದು ಲೇಖನದಲ್ಲಿ ನೋಡಬಹುದು. ಸ್ವಾಮಿ ನಿಶ್ಚಯಾನಂದರ ಜೀವನದ ಬಗ್ಗೆ ಕೆಲವು ಅಂಶಗಳನ್ನು ತಿಳಿದುಕೊಂಡು, ಬಳಿಕ ಅವರಿಬ್ಬರೂ ಸೇರಿ ನಡೆಸಿದ ಅದ್ಭುತ ಸೇವಾಕಾರ್ಯಕ್ಕೆ ಬರೋಣ.

ಸ್ವಾಮಿ ನಿಶ್ಚಯಾನಂದರ ಹಿಂದಿನ ಹೆಸರು ಸೂರಜ್ ರಾವ್. ಅವರದು ಮರಾಠ ಮನೆತನ. ಬ್ರಿಟಿಷ್ ಸೇನೆಯಲ್ಲಿ ಸೈನಿಕರಾಗಿದ್ದರು. ರಾಯಪುರದಲ್ಲಿ ಅವರಿಗೆ ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ನಿರಂಜನಾನಂದರ ಪರಿಚಯವಾಯಿತು. ಆ ಮೂಲಕ ರಾಮಕೃಷ್ಣ ವಿವೇಕಾನಂದ ಭಾವಧಾರೆಯ ಸಂಪರ್ಕವಾಯಿತು. ಸ್ವಾಮಿ ವಿವೇಕಾನಂದರನ್ನು ಭೇಟಿಮಾಡುವ ಸುಯೋಗ ಮದ್ರಾಸಿನಲ್ಲಿ ೧೮೯೭ರಲ್ಲಿ ಸಿಕ್ಕಿತು. ಕಿಕ್ಕಿರಿದ ಜನ ಸಂದಣಿಯ ಮಧ್ಯೆ ೫ ಗಂಟೆ ಕಾದ ನಂತರ ಸ್ವಾಮೀಜಿಯವರೊಡನೆ ಮಾತನಾಡುವ ಅದೃಷ್ಟವೂ ಲಭಿಸಿತು. ನಾಲ್ಕು ವರ್ಷಗಳ ನಂತರ, ಅಂದರೆ ೧೯೦೧ರಲ್ಲಿ ಸಾಂಸಾರಿಕ ಜವಾಬ್ದಾರಿಗಳನ್ನೆಲ್ಲ ಕಳೆದುಕೊಂಡು, ತ್ಯಾಗಜೀವನವನ್ನು ನಡೆಸಲು ಸನ್ನದ್ಧರಾಗಿ, ಸೂರಜ್ ರಾವ್ ಬೇಲೂರು ಮಠಕ್ಕೆ ಹೋದರು. ತನುಮನಗಳನ್ನು ತಮ್ಮ ಗುರುದೇವನ ಸೇವಾ ಕೈಂಕರ್ಯದಲ್ಲಿ ಅರ್ಪಿಸಿಬಿಟ್ಟು, ಸ್ವಾಮಿ ನಿಶ್ಚಯಾನಂದರಾದರು. ೧೯೦೨ರಲ್ಲಿ ಸ್ವಾಮೀಜಿಯವರ ಮಹಾಸಮಾಧಿಯಾಯಿತು. ನೊಂದ ಮನದೊಡನೆ, ತೀರ್ಥಯಾತ್ರೆಗೆ ಹೊರಟ ಅವರು ೧೯೦೬ರ ಕುಂಭಮೇಳದಲ್ಲಿ ಪಾಲ್ಗೊಳ್ಳಲು ಹರಿದ್ವಾರಕ್ಕೆ ಬಂದರು. ಅಲ್ಲಿ ಅನಿರೀಕ್ಷಿತವಾಗಿ ಸ್ವಾಮಿ ಕಲ್ಯಾಣಾನಂದರ ಭೇಟಿಯಾಯಿತು. ಅವರು ನಡೆಸುತ್ತಿದ್ದ ಸೇವಾಕಾರ್ಯವನ್ನು ಕಂಡ ನಿಶ್ಚಯಾನಂದರಿಗೆ ತಮ್ಮ ಬಾಳಿನ ಮಾರ್ಗ ಗೋಚರವಾಯಿತು. ತಮ್ಮ ಗುರುದೇವ ಸ್ವಾಮಿ ವಿವೇಕಾನಂದರ ಸೇವಾದರ್ಶ ಇಲ್ಲಿ ಸಾಕಾರಗೊಂಡಿರುವುದನ್ನು ಕಂಡುಕೊಂಡರು. ಅಲ್ಲಿಯೇ ನಿಂತು, ತಮ್ಮ ಸೋದರ ಸಂನ್ಯಾಸಿಯೊಡನೆ ಸೇರಿ ಮುಂದಿನ ೩೪ ವರ್ಷಗಳ ಕಾಲ ಅಗಾಧ ಪರಿಶ್ರಮದ ಹಾಗೂ ಉಜ್ವಲ ತಪಸ್ವೀ ಜೀವನವನ್ನು ನಡೆಸಿದರು. ಇವರಿಬ್ಬರ ಜೀವನ ಗಾಥೆಯೇ ಈ ಸೇವಾಶ್ರಮದ ನೈಜ ಇತಿಹಾಸವಾಗಿದೆ.



ಸ್ವಾಮಿ ನಿಶ್ಚಯಾನಂದರು

ಕೆಲವು ಕಾಲ ಋಷೀಕೇಶದ ಕಾರ್ಯ ಸ್ಥಗಿತಗೊಂಡಿತ್ತು. ಈಗ ಸ್ವಾಮಿ ನಿಶ್ಚಯಾನಂದರು ಅದನ್ನು ಪುನರಾರಂಭಿಸಿದರು. ಮುಂಜಾನೆಯೇ ಒಂದು ಔಷಧಿ ಪೆಟ್ಟಿಗೆಯನ್ನು ಮತ್ತು ರೋಗಿಗಳ ಆಹಾರದ ಗಂಟನ್ನು ಹಿಡಿದುಕೊಂಡು ಸುಮಾರು ೧೫ ಮೈಲಿಗಳಷ್ಟು ದೂರವನ್ನು ಕ್ರಮಿಸಿ, ಋಷೀಕೇಶವನ್ನು ತಲುಪುವರು. ಅಲ್ಲಿನ ರೋಗಗ್ರಸ್ತ ಸಾಧುಗಳ ಆರೈಕೆ ಮಾಡುವರು. ಮಧುಕರಿ ಭಿಕ್ಷೆ ಬೇಡಿ ಉಣ್ಣುವರು. ಹಲವಾರು ವರ್ಷಗಳ ಕಾಲ, ಪ್ರತಿದಿನ, ಬಿಸಿಲು ಚಳಿ ಮಳೆಗಳೆನ್ನದೆ, ಹೀಗೆ ಸೇವೆ ಮಾಡಿದರು ಸ್ವಾಮಿ ನಿಶ್ಚಯಾನಂದರು.

ಸೇವಾಶ್ರಮವು ತನ್ನ ಸೇವಾಹಸ್ತವನ್ನು ಸಮಾಜದ ಉಪೇಕ್ಷಿತ ಬಾಂಧವರಿಗೂ ಚಾಚಿತು. ಅಸ್ಪೃಶ್ಯರೆನ್ನಿಸಿಕೊಂಡ ದರಿದ್ರ ನಾರಾಯಣರ ಕಾಲೋನಿಗಳಲ್ಲಿಯೂ, ಈ ಇಬ್ಬರು ಸ್ವಾಮಿಗಳು ತಮ್ಮ ಕಾರ್ಯ ಆರಂಭಿಸಿದರು. ಸಂಪ್ರದಾಯಸ್ಥ ಸಂನ್ಯಾಸಿಗಳು ಇದನ್ನು ನಿಂದಿಸಿದರು. ಭಂಗಿಸಾಧುಗಳೆಂದು ಇವರನ್ನು ಹೀಯಾಳಿಸಿದರು. ಸಾಧುಗಳಿಗೆಂದೇ ನಿರ್ಮಾಣವಾದ ಭಿಕ್ಷಾಕೇಂದ್ರಗಳ ಸೌಲಭ್ಯವನ್ನು ಇವರಿಗೆ ನಿರಾಕರಿಸಿದರು. ಆದರೆ ಸ್ವಾಮಿ ವಿವೇಕಾನಂದರ ಅನುಷ್ಠಾನ ವೇದಾಂತದ ಮೂರ್ತಿರೂಪರಾಗಿದ್ದ ಈ ಇಬ್ಬರು ಸ್ವಾಮಿಗಳು ಇದನ್ನೆಲ್ಲವನ್ನೂ ಮೌನದಿಂದ ಸಹಿಸಿಕೊಂಡು, ತಮ್ಮ ಸೇವಾಕಾರ್ಯವನ್ನು ಮುಂದುವರೆಸಿಕೊಂಡು ಹೋದರು.

ಈ ಸಾಧುಗಳ ಸೇವಾಕಾರ್ಯದ ಮಹತ್ವವನ್ನು ಮನಗಂಡ

ಒಬ್ಬರೇ ಸಂಪ್ರದಾಯಸ್ಥ ಸಂನ್ಯಾಸಿಯೆಂದರೆ, ಅಂದಿನ ಕೈಲಾಸಾಶ್ರಮದ ಅಧಿಪತಿಗಳಾಗಿದ್ದ ಮಂಡಲೇಶ್ವರ್ ಶ್ರೀಮತ್ ಸ್ವಾಮಿ ಧನರಾಜ್ ಗಿರಿಜಿ ಮಹಾರಾಜ್. ಅವರೆಂದರೆ ಉತ್ತರಖಂಡದ ಸಾಧುಗಳಿಗೆಲ್ಲ ಗೌರವ. ವರ್ಷಗಳ ಹಿಂದೆ ಸ್ವಾಮಿ ವಿವೇಕಾನಂದರನ್ನು ಭೇಟಿಯಾಗಿದ್ದರು ಇವರು. ಸ್ವಾಮೀಜಿಯವರಿಂದ ತುಂಬ ಪ್ರಭಾವಿತರಾಗಿದ್ದರು. ಒಮ್ಮೆ ಸಾಧುಗಳಿಗಾಗಿ ಒಂದು ದೊಡ್ಡ ಔತಣ ಏರ್ಪಾಡಾಗಿತ್ತು. ಧನರಾಜ್ ಗಿರಿಜಿ ಮಹಾರಾಜರೇ ಅದಕ್ಕೆ ಮುಖ್ಯ ಅತಿಥಿ. ಅವರು ನೆರೆದ ಸಾಧುಗಳ ಮಧ್ಯೆ ರಾಮಕೃಷ್ಣ ಮಿಷನ್ನಿನ ಸಾಧುಗಳು ಇಲ್ಲದಿರುವುದನ್ನು ಕಂಡುಕೊಂಡರು. ಅವರನ್ನು ಉದ್ದೇಶಪೂರ್ವಕವಾಗಿಯೇ ಆಹ್ವಾನಿಸಿಲ್ಲ ಎಂಬುದನ್ನೂ ಮನಗಂಡರು. ಅಲ್ಲಿನ ಸಾಧುಗಳಿಗೆ ಕೋಪದಿಂದ ಹೇಳಿದರು : 'ಏನು, ಜೀವವೇ ಬ್ರಹ್ಮ ಎಂಬ ವೇದವಾಕ್ಯವನ್ನು ಬರಿ ಗಿಳಿಗಳಂತೆ ಗೊಣಗುಟ್ಟುವುದರಿಂದ, ಧಾರ್ಮಿಕರಾಗಿಬಿಟ್ಟರೆಂದೂ, ಆದರ್ಶ ಸಂನ್ಯಾಸಿಗಳಾಗಿಬಿಟ್ಟರೆಂದೂ ನೀವು ತಿಳಿದಿರೇನು? ನೀವು ಬರಿಯ ಶಬ್ದಗಳನ್ನು ಪುನರಾವರ್ತಿಮಾಡುತ್ತೀರಿ. ನಿಮ್ಮ ಬಾಳಿನಲ್ಲಿ ಅದರ ಸಾಕ್ಷಾತ್ಕಾರ ಎಲ್ಲಿ ತಾನೇ ಆಗಿದೆ? ನಿಮಗೆ ಆ ಇಬ್ಬರು ಸಾಧುಗಳ ಬಗ್ಗೆ ಅರಿವಿಲ್ಲ. ಅವರು ಸಂನ್ಯಾಸ ಆದರ್ಶದ ನೈಜ ಪ್ರತಿನಿಧಿಗಳಾಗಿದ್ದಾರೆ. ಜೀವವೇ ಶಿವನೆಂದು ನೀವು ಬರಿಯ ಮಾತುಗಳಲ್ಲಿ ಹೇಳುವುದನ್ನು ಅವರು ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತರಲು ಪ್ರಯತ್ನಿಸುತ್ತಿದ್ದಾರೆ. ಎಲ್ಲರಲ್ಲಿಯೂ ಭಗವಂತನ ಆವಿರ್ಭಾವವನ್ನೇ ಕಾಣುತ್ತಿದ್ದಾರೆ. ತಕ್ಷಣವೇ ಹೋಗಿ ಅವರನ್ನು ಗೌರವಾದರಗಳಿಂದ ಕರೆದುಕೊಂಡು ಬನ್ನಿ. ಇಲ್ಲವೆಂದರೆ ಈ ಔತಣದಲ್ಲಿ ನಾನು ಭಾಗಿಯಾಗಲಾರೆ.' ಮಂಡಲೇಶ್ವರರ ಕಟುವಾದ ನುಡಿಗಳನ್ನು ಕೇಳಿ ಅಲ್ಲಿ ನೆರೆದಿದ್ದವರ ಕಣ್ಣು ತೆರೆಯಿತು. ಅಂದಿನಿಂದ ಈ ಇಬ್ಬರು ಸಂನ್ಯಾಸಿಗಳಿಗೆ ಸಾಧು ಸಮಾಜದಲ್ಲಿ ಗೌರವ ದೊರಕಿತು.

ಸ್ವಾಮಿ ಕಲ್ಯಾಣಾನಂದರು ಮತ್ತು ಸ್ವಾಮಿ ನಿಶ್ಚಯಾನಂದರು ನಿರ್ಗತಿಕ ಸಾಧುಗಳು ಮರಣ ಹೊಂದಿದಾಗ ಅವರ ಶವಸಂಸ್ಕಾರದ ಭಾರವನ್ನೂ ಹೊತ್ತುಕೊಳ್ಳುತ್ತಿದ್ದರು. ಒಮ್ಮೆ ಗಂಗೆಯ ತಟದಲ್ಲಿ ಎರಡು ದಿವಸಗಳಿಂದ ಸಾಧುವೊಬ್ಬರ ದೇಹ ಕೇಳುವವರಿಲ್ಲದೆ ಬಿದ್ದಿತ್ತು. ಕಡೆಗೆ ಈ ಇಬ್ಬರು ಸ್ವಾಮಿಗಳೇ ಅದನ್ನು ಹೊತ್ತು ನದಿಯಲ್ಲಿ ಮಾಡಬೇಕಾದ ಸಂಸ್ಕಾರ ಕಾರ್ಯಗಳನ್ನು ಮಾಡಿದರು. ಸೇವೆಯ ಅತಿ ಉನ್ನತ ಉದಾಹರಣೆ ಇಲ್ಲಿ ನಮಗೆ ಸಿಗುತ್ತದೆ.

ಸೇವಾಶ್ರಮದ ವೈದ್ಯಕೀಯ ಸೌಲಭ್ಯಗಳು ವಿಸ್ತಾರವಾಗುತ್ತ ಹೋದವು.೧೯೦೬ರಷ್ಟು ಹಿಂದೆಯೇ, ತಹಲ್‌ರಾಮ್ ಗಂಗಾರಾಮ್ ಎಂಬ ಜಮೀನ್ದಾರನ ಸಹಾಯದಿಂದ ಆಯುರ್ವೇದ ಚಿಕಿತ್ಸಾ ವಿಭಾಗ ಆರಂಭವಾಯಿತು. ಮಲೇರಿಯಾ ಆಗಿನ ಕಾಲದಲ್ಲಿ ಅತಿ ಭಯಂಕರ ಸಾಂಕ್ರಾಮಿಕ ರೋಗ. ಹಾಗೆಯೇ ಕ್ಷಯವೂ ಕೂಡ. ಆಶ್ರಮದ ಸಾಧುಗಳು ಇಂತಹ ಸೋಂಕು ರೋಗಗಳಿಂದ ಪೀಡಿತರಾದ ಜನರ ಸೇವೆಯನ್ನೂ ಕೈಗೊಂಡರು. ೧೯೧೩ರಲ್ಲಿ ಪ್ರತ್ಯೇಕ ಕ್ಷಯರೋಗ ವಿಭಾಗ ಆರಂಭವಾಯಿತು.

೧೯೦೭ರಲ್ಲಿ ಸೇವಾಶ್ರಮಕ್ಕೆ ಭೇಟಿಕೊಟ್ಟ ಪಂಜಾಬಿನ ಕೇಸರಿ, ಸ್ವಾತಂತ್ರ್ಯಯೋಧ ಶ್ರೀ ಲಾಲಾ ಲಜಪತರಾಯರು ಮಾನವತೆಯ



ಕನ್‌ಖಲ್ ಸೇವಾಶ್ರಮದ ವಿವೇಕಾನಂದ ಶತಮಾನೋತ್ಸವ ಸ್ಮಾರಕ ಆಸ್ಪತ್ರೆ

ಸೇವೆಗಾಗಿ ಈ ಸೇವಾಶ್ರಮ ಕೈಗೊಳ್ಳುತ್ತಿರುವ ಬಹೂಪಯೋಗಿ ಸೇವಾಕಾರ್ಯಗಳನ್ನು ಪ್ರಶಂಸಿಸಿದರು. ಮೇ ೧೬, ೧೯೧೧ರಂದು ಭಗಿನಿ ನಿವೇದಿತಾ, ಸುಪ್ರಸಿದ್ಧ ವಿಜ್ಞಾನಿ ಶ್ರೀ ಜಗದೀಶ ಚಂದ್ರ ಬೋಸ್ ಮತ್ತು ಅವರ ಪತ್ನಿಯ ಜೊತೆ ಸೇವಾಶ್ರಮವನ್ನು ಸಂದರ್ಶಿಸಿದರು. ಎಸ್.ಪಿ.ಜಿ. ಚರ್ಚ್ ಆಫ್ ಇಂಗ್ಲೆಂಡಿನ ಶ್ರೀ ಜೆ.ಬಿ. ಫ್ರಾಂಕ್ ಎನ್ನುವವರು ೯ ಮಾರ್ಚ್, ೧೯೧೧ರಂದು ಸೇವಾಶ್ರಮವನ್ನು ನೋಡಲು ಬಂದರು. ಸಂದರ್ಶಕರ ಪುಸ್ತಕದಲ್ಲಿ ಅವರು '**ಭಾರತದ ಜೀವಂತ ಚೈತನ್ಯವೇ ಈ ಸಂಸ್ಥೆಯಲ್ಲಿ ಸಕ್ರಿಯ ಒಳಿತಿನ ರೂಪವನ್ನು ತಳೆದಿರುವುದನ್ನು ಕಾಣುತ್ತಿದ್ದೇನೆ**' ಎಂದು ಬರೆದರು.

೪೫ ಮೈಲಿಗಳ ಆಸುಪಾಸಿನಲ್ಲಿರುವ ಏಕೈಕ ಆಸ್ಪತ್ರೆಯಾಗಿತ್ತು ಸೇವಾಶ್ರಮ. ಆದ್ದರಿಂದ ಬರುವ ರೋಗಿಗಳ ಸಂಖ್ಯೆಯೂ ಹೆಚ್ಚಿತು. ೧೯೧೧ರಲ್ಲಿ ೨೦ ಹಾಸಿಗೆಗಳ ಹೊಸ ವಾರ್ಡ್‌ಅನ್ನು ಕಟ್ಟಲಾಯಿತು. ಹೆಚ್ಚುತ್ತಿರುವ ಹೊರರೋಗಿಗಳ ಸೌಕರ್ಯಕ್ಕಾಗಿ ಹೊರರೋಗಿ ವಿಭಾಗವನ್ನು ಕಟ್ಟಲು ಮುಖ್ಯರಸ್ತೆಯಲ್ಲಿ ೬ ಬಿಘ ಜಾಗವನ್ನು ತೆಗೆದುಕೊಳ್ಳಲಾಯಿತು. ಆದರೆ ಅಷ್ಟರಲ್ಲಿ ಪ್ರಥಮ ಮಹಾಯುದ್ಧ ಆರಂಭಗೊಂಡಿದ್ದರಿಂದ ಅದು ಸಂಪೂರ್ಣವಾಗಿದ್ದು ೧೯೨೩ರಲ್ಲಿಯೇ. ೧೯೨೧-೨೩ರ ಕಾಲಾವಧಿಯಲ್ಲಿ ಅನೇಕ ಹೊಸ ಕಟ್ಟಡಗಳು ನಿರ್ಮಾಣಗೊಂಡವು. ಈಗಿನ ಆಫೀಸ್ ಕಟ್ಟಡ, ಹಳೆಯ ಶಸ್ತ್ರಚಿಕಿತ್ಸೆ ವಿಭಾಗ ಮತ್ತು ಸೋಂಕು ರೋಗಿಗಳಿಗೆ ೨೧ ಹಾಸಿಗೆಗಳಿರುವ ಪ್ರತ್ಯೇಕ ವಾರ್ಡ್ ಇವೆಲ್ಲವುಗಳನ್ನೂ ೧೮,೦೦೦ ರೂಪಾಯಿಗಳ ವೆಚ್ಚದಲ್ಲಿ ಕಟ್ಟಲಾಯಿತು. ಔಷಧಾಲಯ ಮತ್ತು ಹೊರರೋಗಿಗಳ ವಿಭಾಗ, ಶಸ್ತ್ರಚಿಕಿತ್ಸಾ ಕೊಠಡಿ, ವೈದ್ಯರ ತಪಾಸಣಾ ಕೊಠಡಿಗಳು ೧೭,೦೦೦ ರೂಪಾಯಿಗಳಿಗೂ ಹೆಚ್ಚಿನ ವೆಚ್ಚದಲ್ಲಿ ನಿರ್ಮಾಣಗೊಂಡವು. ಇದಕ್ಕಾಗಿ ಹಲವಾರು ದಾನಿಗಳು ಸಹಾಯ ಮಾಡಿದರು.

ಹಲವು ಕಡೆಗಳಿಂದ ಸಹಾಯವು ಕಾಲಕಾಲಕ್ಕೆ ಅನಿರೀಕ್ಷಿತವಾಗಿ ಒದಗಿ ಬಂದದ್ದು ಸೇವಾಶ್ರಮದ ಹತ್ತು ದಶಕಗಳ ಸುದೀರ್ಘ ಇತಿಹಾಸದಲ್ಲಿ ಒಂದು ವಿಶಿಷ್ಟವಾದ ಅಂಶವಾಗಿದೆ. ಕಷ್ಟ ಕಾರ್ಪಣ್ಯಗಳ ಅವಧಿಯೂ ಇಲ್ಲದಿರಲಿಲ್ಲ. ಅದರಲ್ಲೂ ೧೯೧೫ರಿಂದ ೧೯೨೦ರವರೆಗಿನ ಕಾಲಮಾನವು ಕಡುಪರೀಕ್ಷೆಯ ಅವಧಿಯಾಗಿತ್ತು.

ಆದರೆ ಸೇವಾನಿರತ ಸಾಧುಗಳು ಧೃತಿಗೆಡದೆ ಕಾರ್ಯವನ್ನು ಮುಂದುವರೆಸಿಕೊಂಡು ಹೋದದ್ದು ಅವರಲ್ಲಿದ್ದ ಅದಮ್ಯ ಅಂತಸ್ಸತ್ತ್ವದ ಹಾಗೂ ಭಗವಂತನ ಮೇಲಿನ ಅವರುಗಳ ಪೂರ್ಣ ನಿರ್ಭರತೆಯ ದ್ಯೋತಕವಾಗಿದೆ.

ಹರಿಜನರ ಕಲ್ಯಾಣ ಕನ್‌ಖಲ್ ಸೇವಾಶ್ರಮವು ಕೈಗೊಂಡ ಇನ್ನೊಂದು ಕ್ರಾಂತಿಕಾರಕ ಸೇವಾಕಾರ್ಯ. ೧೯೧೩ರಷ್ಟು ಹಿಂದೆಯೇ, ಹರಿಜನರ ಮಕ್ಕಳಿಗಾಗಿ ರಾತ್ರಿಶಾಲೆ ಆರಂಭವಾಯಿತು. ಒಬ್ಬ ಬ್ರಹ್ಮಚಾರಿಯೇ ೩೦ಕ್ಕೂ ಹೆಚ್ಚಿನ ಮಕ್ಕಳಿಗೆ ಬೋಧಿಸುತ್ತಿದ್ದರು. ೧೯೦೫ರಲ್ಲಿ ಗ್ರಂಥಾಲಯ ಮತ್ತು ವಾಚನಾಲಯಗಳನ್ನು ತೆರೆಯಲಾಯಿತು.

ಶ್ರೀರಾಮಕೃಷ್ಣರ ಹಲವು ಪ್ರತ್ಯಕ್ಷಶಿಷ್ಯರು ಈ ಸೇವಾಶ್ರಮಕ್ಕೆ ಭೇಟಿಕೊಟ್ಟು ಇದನ್ನು ಪಾವನಗೊಳಿಸಿದ್ದಾರೆ. ರಾಮಕೃಷ್ಣ ಮಹಾಸಂಘದ ಪ್ರಥಮ ಅಧ್ಯಕ್ಷರಾದ ಸ್ವಾಮಿ ಬ್ರಹ್ಮಾನಂದಜಿಯವರು ೧೯೦೩ರಲ್ಲಿ ಇಲ್ಲಿಗೆ ಮೊದಲಬಾರಿಗೆ ಬಂದು ಒಂದು ತಿಂಗಳ ಕಾಲ ತಂಗಿದ್ದರು. ಮತ್ತೆ ಮಾರ್ಚ್ ೧೯೧೨ರಲ್ಲಿ ಸ್ವಾಮಿ ಶಿವಾನಂದಜಿಯವರು ಸ್ವಾಮಿ ತುರೀಯಾನಂದಜಿ ಮೊದಲಾದವರ ಜೊತೆಗೆ ಆಗಮಿಸಿ ಸುಮಾರು ೭ ತಿಂಗಳ ಕಾಲ ವಾಸ್ತವ್ಯ ಹೂಡಿದರು. ಅದಲ್ಲದೆ ದುರ್ಗಾಪೂಜೆಯ ಉತ್ಸವವನ್ನೂ ಇಲ್ಲಿ ನಡೆಸಿದರು. ಸ್ವಾಮಿ ಬ್ರಹ್ಮಾನಂದರು, 'ಈ ಸೇವಾಶ್ರಮವು ಒಂದು ವಿರಾಟ್ ಉಪಾಸನಾ ಮಂದಿರ, ಇದರಲ್ಲಿ ಭಾಗಿಗಳಾಗಿರುವ ಸಹಾಯಕರು, ಕಾರ್ಯಕರ್ತರು ಮತ್ತು ಸಹಾಯ ಪಡೆದವರು—ಇವರೆಲ್ಲರೂ ಧನ್ಯರು' ಎಂದು ಒಂದು ಕಡೆ ಹೇಳಿದ್ದಾರೆ.

ಸ್ವಾಮಿ ತುರೀಯಾನಂದರು ನಾಂಗೋಲ್ ಎಂಬ ಸಮೀಪದ ಸ್ಥಳದಲ್ಲಿ ತಪಸ್ಸನ್ನಾಚರಿಸುತ್ತಿದ್ದಾಗ ವ್ಯಾಧಿಗ್ರಸ್ತರಾದರು. ಸ್ವಾಮಿ ಕಲ್ಯಾಣಾನಂದರು ಅವರನ್ನು ಸೇವಾಶ್ರಮಕ್ಕೆ ಕರೆತಂದು ಉಪಚರಿಸಿದರು. ಆ ಸಮಯದಲ್ಲಿ ಸ್ವಾಮಿ ಪ್ರೇಮಾನಂದರೂ ಅಲ್ಲಿಯೇ ಇದ್ದರು. ಸ್ವಾಮಿ ಅತುಲಾನಂದರೆಂಬ ಸ್ವಾಮಿಗಳು ಅಮೆರಿಕಾದವರು, ವಿವೇಕಾನಂದರ ದರ್ಶನ ಪಡೆದವರು. ಅವರೂ ಆಗ ಅಲ್ಲಿಯೇ ಇದ್ದರು. ಅವರು ಆಗ ನಡೆಸಿದ ಆಧ್ಯಾತ್ಮಿಕ ಮಾತುಕತೆಗಳನ್ನು *With the Swamis in India and America* ಎಂಬ ತಮ್ಮ ಪುಸ್ತಕದಲ್ಲಿ ಸೊಗಸಾಗಿ ನಿರೂಪಿಸಿದ್ದಾರೆ. ಸೇವಾಶ್ರಮವನ್ನು ಸಂದರ್ಶಿಸಿದ ಶ್ರೀರಾಮಕೃಷ್ಣರ ಇತರ ಪ್ರತ್ಯಕ್ಷ ಶಿಷ್ಯರೆಂದರೆ ಸ್ವಾಮಿ ಶಾರದಾನಂದರು ಮತ್ತು ಸ್ವಾಮಿ ಅಭೇದಾನಂದರು.

ಸ್ವಾಮಿ ಕಲ್ಯಾಣಾನಂದರು ಮತ್ತು ಸ್ವಾಮಿ ನಿಶ್ಚಯಾನಂದರು ೧೯೩೪ರವರೆಗೂ ಅವಿರತವಾಗಿ ಸೇವಾಶ್ರಮಕ್ಕಾಗಿ ಶ್ರಮಿಸಿದರು. ಕಾಲ ತನ್ನ ಮೊದಲ ಬಲಿಯನ್ನು ತೆಗೆದುಕೊಂಡಿತು. ೨೨ ಅಕ್ಟೋಬರ್ ೧೯೩೪ರಂದು ತಮ್ಮ ಗುರುದೇವ ಸ್ವಾಮಿ ವಿವೇಕಾನಂದರ ಭಾವಚಿತ್ರವನ್ನೇ ದಿಟ್ಟಿಸುತ್ತ ಸ್ವಾಮಿ ನಿಶ್ಚಯಾನಂದರು ಕಾಲಾತೀತರಾದರು. ಸ್ವಾಮಿ ಕಲ್ಯಾಣಾನಂದರಿಗೆ ಇದೊಂದು ಸಹಿಸಲಾಗದ ಆಘಾತವಾಗಿತ್ತು. ಅದಲ್ಲದೆ ಅವರ ಆರೋಗ್ಯವೂ ಹದಗೆಟ್ಟಿತ್ತು. ೧೯೩೭ರಲ್ಲಿ ಅವರು ಅಸುನೀಗಿದರು.

ಅವರಿಬ್ಬರೂ ನೆಟ್ಟು ಬೆಳೆಸಿದ ಸಸಿ ಹೆಮ್ಮರವಾಗಿ ನೂರಾರು ಜನರಿಗೆ ಆಶ್ರಯತಾಣವಾಯಿತು. ಮುಂದೆ ಬಂದ ಸ್ವಾಮಿಗಳು ಆಧುನೀಕರಣಕ್ಕೆ ಹೆಚ್ಚು ಒತ್ತು ನೀಡಿದರು. ಚಟುವಟಿಕೆಗಳೂ ವಿಸ್ತಾರಗೊಂಡವು. ಪ್ರಸ್ತುತ ಸ್ವಾಮಿ ನಿತ್ಯಶುದ್ಧಾನಂದಜಿಯವರು ಸೇವಾಶ್ರಮದ ಕಾರ್ಯದರ್ಶಿಗಳಾಗಿದ್ದಾರೆ. ಸೇವಾಶ್ರಮವು ಈಗ ಅತ್ಯಾವಶ್ಯಕವಾದ ಎಲ್ಲ ಆಧುನಿಕ ವೈದ್ಯಕೀಯ ಸಲಕರಣೆಗಳಿಂದ ಸುಸಜ್ಜಿತವಾಗಿ, ಸಾಧುಗಳಿಗೆ ಮತ್ತು ಕಡುಬಡವರಿಗೆ ಉತ್ತಮ ವೈದ್ಯಕೀಯ ಸೇವೆಯನ್ನು ಒದಗಿಸುತ್ತಿದೆ. ೧೯೯೯-೨೦೦೦ ಸಾಲಿನ ವರದಿಯ ಪ್ರಕಾರ ೨೦೦ ಹಾಸಿಗೆಗಳ ಸೌಲಭ್ಯವಿರುವ ಈ ಸೇವಾಶ್ರಮದ ಆಸ್ಪತ್ರೆಯಲ್ಲಿ ಆರೈಕೆ ಪಡೆದ ಒಳ ರೋಗಿಗಳ ಒಟ್ಟು ಸಂಖ್ಯೆ ೩೮೮೭. ಹೊರರೋಗಿಗಳ ಒಟ್ಟು ಸಂಖ್ಯೆ, ೧,೫೫,೬೦೪. ಸಂಚಾರಿ ಆಸ್ಪತ್ರೆಯು ಹರಿದ್ವಾರದ ಸುತ್ತಮುತ್ತಲ ಗ್ರಾಮಗಳನ್ನು ತಲುಪುತ್ತಿದ್ದು, ಇದರ ಸೌಲಭ್ಯವನ್ನು ಈ ಸಾಲಿನಲ್ಲಿ ೧೧,೧೧೦ ಜನ ಪಡೆದಿದ್ದಾರೆ.

ರಾಮಕೃಷ್ಣ ಮಿಷನ್ನಿನ ಸೇವಾಸಂಸ್ಥೆಗಳು ಬರಿಯ ಸೇವಾ ಕ್ಷೇತ್ರಗಳಲ್ಲ. ಅವು ಆಧ್ಯಾತ್ಮಿಕ ಕೇಂದ್ರಗಳು. ಅವುಗಳಲ್ಲಿ ನಡೆಯುತ್ತಿರುವುದು ಜೀವರೂಪೀ ಭಗವಂತನ ಪೂಜೆ. ಆ ಪೂಜೆಯಿಂದ ಆಧ್ಯಾತ್ಮಿಕ ಉನ್ನತಿ ಉಂಟಾಗುವುದು. ಸರ್ವರಲ್ಲಿಯೂ ಆ ಪರಮಾತ್ಮನೇ ಇದ್ದಾನೆ ಎಂಬ ಪರಮಸತ್ಯದ ಸಾಕ್ಷಾತ್ಕಾರವಾಗುವುದು. ಇದೇ ರಾಮಕೃಷ್ಣ ವಿವೇಕಾನಂದರು ಈ ಯುಗಕ್ಕೆ ನೀಡಿದ ತ್ಯಾಗ ಸೇವೆಗಳೆಂಬ ಸೂತ್ರರೂಪದ ಸಾಧನಾಮಾರ್ಗ. ಭಾರತದ ಪುನರುತ್ಥಾನಕ್ಕೆ, ಮನುಕುಲದ ಒಳಿತಿಗೆ ಇದೊಂದೇ ಸಮರ್ಪಕವಾದ ಹೆದ್ದಾರಿಯಾಗಿದೆ. ಈ ಭವ್ಯ ಆದರ್ಶದ ಮಾದರಿ ಪ್ರಯೋಗಾಲಯವಾಗಿದೆ ಕನ್‌ಖಲ್‌ನ ಸೇವಾಶ್ರಮ. ಇದರ ಆದರ್ಶದ ಬೆಳಕು ನಮ್ಮ ಬಾಳನ್ನೂ ಬೆಳಗಲಿ. ✻

---

## ನೀರನ್ನು ಉಳಿಸುವ ಪ್ರಾಣಿಸಂಕುಲ!

ಮಂಗಗಳ ಪರಿಚಯ ಯಾರಿಗಿಲ್ಲ? ಆದರೆ ಕನ್‌ಖಲ್‌ನ ರಾಮಕೃಷ್ಣ ಮಿಷನ್ ಸೇವಾಶ್ರಮದ ಬಳಿಯಲ್ಲಿನ ಎರಡು ಮಂಗಗಳು ಇದಕ್ಕೊಂದು ಅಪವಾದ. ಒಮ್ಮೆ ಅಲ್ಲಿನ ಮರಿಕೋತಿಯೊಂದಕ್ಕೆ ಗಾಯವಾದಾಗ ಅಲ್ಲಿನ ಹೊರರೋಗಿಗಳ ಸಾಲಿನ ಬಳಿ ಬಂದು ತನ್ನ ಸರದಿಗಾಗಿ ಕಾದು ಅಲ್ಲಿನ ಕಾಂಪೌಂಡರ್ ಸ್ವಾಮಿಗಳಿಂದ ಗಾಯಕ್ಕೆ ಚಿಕಿತ್ಸೆಮಾಡಿಸಿಕೊಂಡು ಬ್ಯಾಂಡೇಜ್ ಕಟ್ಟಿಸಿಕೊಂಡು ಶಾಂತವಾಗಿ ಹಿಂತಿರುಗಿತು! ಇನ್ನೊಮ್ಮೆ ಮರಿಕೋತಿಯೊಂದಕ್ಕೆ ಬಾಯಾರಿಕೆಯಾದಾಗ ಸೇವಾಶ್ರಮದ ಕೊಳಾಯಿಯ ಬಳಿ ನೀರಿಗಾಗಿ ಬಂತು. ಆದರೆ ಕೊಳಾಯಿಯ ಮುಚ್ಚಳಿಕೆ ಭದ್ರವಾಗಿದ್ದರಿಂದ ಅದಕ್ಕೆ ಅದನ್ನು ತೆರೆಯಲು ಸಾಧ್ಯವಾಗಲಾಗಲಿಲ್ಲ. ಇದನ್ನು ನೋಡುತ್ತಿದ್ದ ದೊಡ್ಡ ಕೋತಿಯೊಂದು ಆ ಕೊಳಾಯಿಯ ಬಳಿ ಬಂತು. ಮರಿಕೋತಿ ಸ್ವಲ್ಪ ಹೆದರಿಕೆಯಿಂದ ದೂರ ಓಡಿಹೋಗಿ ನೋಡುತ್ತಿತ್ತು. ಆ ದೊಡ್ಡ ಕೋತಿ ಕೊಳಾಯಿಯ ಮುಚ್ಚಳಿಕೆ ತೆಗೆದು ನೀರು ಬರುವಂತೆ ಮಾಡಿ ಮರಿಕೋತಿ ಬರಲು ಅನುವು ಮಾಡಿಕೊಡಲು ದೂರ ಹೋಯಿತು. ಮರಿಕೋತಿ ನೀರು ಹರಿಯುತ್ತಿದ್ದ ಕೊಳಾಯಿಯ ಬಳಿ ಬಂದು ನೀರು ಕುಡಿದು ತನ್ನ ಬಾಯಾರಿಕೆಯನ್ನು ತಣಿಸಿಕೊಂಡಿತು. ತಾಳಿ, ಇಲ್ಲಿಗೇ ಮುಗಿಯಲಿಲ್ಲ ಈ ಮರ್ಕಟ ಕಾಂಡ. ನೀರು ಕುಡಿದು ಮರಿಕೋತಿ ಅಲ್ಲಿಂದ ತೆರಳಿದ ನಂತರ ದೊಡ್ಡಕೋತಿ ಮತ್ತೊಮ್ಮೆ ಕೊಳಾಯಿಯ ಬಳಿ ಬಂದು ಕೊಳಾಯಿಯನ್ನು ಮುಚ್ಚಿ ನೀರನ್ನು ನಿಲ್ಲಿಸಿತು! ನೀರನ್ನು ಪೋಲು ಮಾಡಬೇಡ ಎಂದು ಬಾರಿ ಬಾರಿಗೂ ಹೇಳಿಸಿಕೊಳ್ಳುವ ಮನುಷ್ಯರಿಗೆ ಈ ಮಂಗಗಳಿಂದ ಕಲಿಯುವುದಿದೆಯಲ್ಲವೇ? (ವೇದಾಂತ ಕೇಸರಿ, ಮಾರ್ಚ್, ೨೦೦೧)